# ಕೋಳಿಪೇಟೆಯ ಬಟ್ಟೆ ಬಜಾರ್

■ ಆರ್.ಜಿತೇಂದ್ರ
ಚಿತ್ರ: ತಾಜುದ್ದೀನ್ ಆಜಾದ್



ಒಂದು ಶರ್ಟಿಗೆ ಎರಡು ರೂಪಾಯಿ, ಪ್ಯಾಂಟಿಗೆ ಐದು, ಸೀರೆಗೆ ಹತ್ತು, ರೇಷ್ಮೆಯಾಗಿದ್ದರೆ ಇಪ್ಪತ್ತು–ಮೂವತ್ತು... ಹೆಚ್ಚೆಂದರೆ ಐವತ್ತು ರೂಪಾಯಿ.. ಅಷ್ಟೆ!

–ಇದು ಹುಬ್ಬಳ್ಳಿಯಲ್ಲಿ ನಡೆಯುವ ಹಳೇ ಬಟ್ಟೆಗಳ ಸಂತೆಯ ವಿಶೇಷ. ಇಲ್ಲಿನ ಕೋಳಿಪೇಟೆಯಲ್ಲಿ ಪ್ರತಿ ಶನಿವಾರ ಹಾಗೂ ಹಾಗೂ ಹಳೇಹುಬ್ಬಳ್ಳಿಯಲ್ಲಿ ಪ್ರತಿ ಭಾನುವಾರ ಬಟ್ಟೆಗಳ ಸಂತೆ ನಡೆಯುತ್ತದೆ. ಹಳೇ ಬಟ್ಟೆಗಳನ್ನು ಗುಡ್ಡೆ ಹಾಕಿ ಮಾರಾಟ ಮಾಡಲಾಗುತ್ತದೆ. ಎಲ್ಲ ವಯೋಮಾನದವರಿಗೂ ನಾನಾ ನಮೂನೆಯ ಶರ್ಟುಗಳು, ಬಗೆ ಬಗೆಯ ಜೀನ್ಸ್ ಪ್ಯಾಂಟು, ಬಣ್ಣ ಮಾಸಿದ ಹಳೆಯ ಸೀರೆಗಳು, ಹಳೆಯ ರೇಷ್ಮೆ ಕಸೂತಿಯಿಂದ ಕೂಡಿದ ಭಾರಿ ತೂಕದ ಸೀರೆಗಳು, ಸ್ವೆಟರ್ ಹೀಗೆ ತರಾವರಿ ಸೆಕೆಂಡ್ ಹ್ಯಾಂಡ್ ಬಟ್ಟೆಗಳು ಇಲ್ಲಿ ಸಿಗುತ್ತವೆ.

ಬಡವರ ಪಾಲಿಗೆ ಈ ಸಂತೆ ಅಗ್ಗದ ದರದಲ್ಲಿ ಕನಸುಗಳನ್ನು ನನಸಾಗಿಸುವ ಮಾರ್ಗ. ಇಲ್ಲಿ ಕೇವಲ ಎರಡರಿಂದ ಐದು ರೂಪಾಯಿಗೆ ಹಳೆಯ ಶರ್ಟು ಸಿಗುತ್ತದೆ! ಕೆಲವೇ ರೂಪಾಯಿಗಳಲ್ಲಿ ಜೀನ್ಸ್ ಪ್ಯಾಂಟು ದೊರಕುತ್ತದೆ. ಹುಡುಕಿದರೆ ಪ್ರಸಿದ್ಧ ಕಂಪೆನಿಗಳ ಬಟ್ಟೆಗಳು ದೊರಕುತ್ತವೆ. ಹುಬ್ಬಳ್ಳಿ ಮಾತ್ರವಲ್ಲದೆ ಅಕ್ಕಪಕ್ಕದ ಹಳ್ಳಿಗಳ ಮಂದಿಯೂ ಇಲ್ಲಿ ಬಟ್ಟೆ ಖರೀದಿಗೆ ಬರುತ್ತಾರೆ. ಗುಡ್ಡೆಯಲ್ಲಿ ತಡಕಾಡಿ, ತಮಗೆ ಬೇಕಾದದ್ದನ್ನು ಹೆಕ್ಕಿ, ಚೌಕಾಸಿ ಮಾಡಿ ಒಯ್ಯುತ್ತಾರೆ.

### ವ್ಯಾಪಾರವೇ ಬದುಕು

ಸಂತೆಯ ದಿನದಲ್ಲಿ ಏನಿಲ್ಲವೆಂದರೂ ಎಂಭತ್ತರಿಂದ ನೂರು ವ್ಯಾಪಾರಿಗಳು ಹೀಗೆ ಬಟ್ಟೆ ಗಂಟುಗಳನ್ನು ಹೊತ್ತು ಇಲ್ಲಿ ವ್ಯಾಪಾರಕ್ಕೆ ಕೂರುತ್ತಾರೆ. ಈ ಹಳೆಯ ಬಟ್ಟೆಗಳ ವ್ಯಾಪಾರವೇ ಇವರಿಗೆ ಬದುಕು.

ವಾರದಲ್ಲಿ ಐದು ದಿನ ಮನೆ ಮನೆಗೆ ತಿರುಗುವ ಈ ವ್ಯಾಪಾರಿಗಳು ಅಲ್ಲಿ ಹಳೆಯ ಬಟ್ಟೆಗಳನ್ನು ಸಂಗ್ರಹಿಸಿ ಅದರ ಬದಲಿಗೆ ಹೊಸ ಪಾತ್ರೆ ನೀಡಿ ಬರುತ್ತಾರೆ. ಹೀಗೆ ಸಂಗ್ರಹಿಸಿದ ಬಟ್ಟೆಗಳನ್ನು ವಾರಾಂತ್ಯದಲ್ಲಿ ಸಂತೆಯಲ್ಲಿ ಮಾರುತ್ತಾರೆ.

ಹುಬ್ಬಳ್ಳಿ– ಧಾರವಾಡ ಮಾತ್ರವಲ್ಲದೆ ನೆರೆಯ ರಾಣೆಬೆನ್ನೂರು, ಗದಗ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಭಾಗಗಳಿಂದಲೂ ಇಲ್ಲಿ ವ್ಯಾಪಾರಕ್ಕೆ ಬರುತ್ತಾರೆ.

'ಸಂತೆಯ ದಿನ ಏನಿಲ್ಲವೆಂದರೂ 1500–2000 ರೂಪಾಯಿ ವ್ಯಾಪಾರವಾಗುತ್ತದೆ. ನಮ್ಮೆಲ್ಲ ಖರ್ಚು ಕಳೆದರೆ 500–600 ರೂಪಾಯಿ ಲಾಭ ದೊರಕುತ್ತದೆ. ಇದು ನಮ್ಮ ಇಡೀ ವಾರದ ಸಂಪಾದನೆ' ಎನ್ನುತ್ತಾರೆ ಹುಬ್ಬಳ್ಳಿಯ ಬಂಕಾಪುರ ಚೌಕದ ವ್ಯಾಪಾರಿ ಗುರುನಾಥ.



ಕೇವಲ ಸಂತೆಗಷ್ಟೇ ಈ ವ್ಯಾಪಾರ ಸೀಮಿತವಾಗಿಲ್ಲ. ಇಲ್ಲಿಂದ ಪುಣೆ, ಮೀರಜ್ ಮೊದಲಾದ ಪ್ರದೇಶಳಿಗೂ ಈ ಬಟ್ಟೆಗಂಟುಗಳು ಮಾರಾಟವಾಗುತ್ತವೆ. ಮುಖ್ಯವಾಗಿ ಗಾರ್ಮೆಂಟ್ ಫ್ಯಾಕ್ಟರಿಗಳಿಗೆ ಈ ಬಟ್ಟೆಗಳನ್ನು ಒಯ್ಯಲಾಗುತ್ತದೆ. ದೂರದ ಊರುಗಳಿಂದ ಆಗಮಿಸುವ ವ್ಯಾಪಾರಿಗಳು ಈ ಹಳೆಯ ಬಟ್ಟೆಗಳನ್ನು 'ಲಾಟ್'ನಲ್ಲಿ ಒಯ್ಯುತ್ತಾರೆ.

ಇದಾದ ನಂತರವೂ ವ್ಯಾಪಾರವಾಗದ ಬಟ್ಟೆಗಳು ಕೌದಿ ಹೊಲಿಯಲು, ವಾಹನ ಒರೆಸಲು ಬಳಕೆಯಾಗುತ್ತವೆ. ■